


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಹುನೈನ್ ಯುದ್ಧಕ್ಕೆ ಸಂಬಂಧಿಸಿ ಮತ್ತಷ್ಟು ವಿವರಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29–08–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಹುನೈನ್ ಯುದ್ಧಕ್ಕೆ ಸಂಬಂಧಿಸಿದ ಕೆಲವು ಹೆಚ್ಚಿನ ವಿವರಗಳನ್ನು ನಾನು ಹೇಳುತ್ತೇನೆ. ಹಝ್ರತ್ ಪೈಗಂಬರ್(ಸ) ಮಕ್ಕಾದಿಂದ ಹೊರಡುವಾಗ, ಹಝ್ರತ್ ಅತಾಬ್ ಬಿನ್ ಅಸೀದ್(ರ)ರನ್ನು ಅಲ್ಲಿಗೆ ಅಮೀರ್ ಆಗಿ ನೇಮಿಸಿದರು. ಮಕ್ಕಾದಲ್ಲಿ ಮೊದಲ ಬಾರಿಗೆ ನೇಮಕಗೊಂಡ ಅಮೀರ್ ಅವರಾಗಿದ್ದರು. ಆ ಸಮಯದಲ್ಲಿ ಹಝ್ರತ್ ಅತಾಬ್(ರ)ರಿಗೆ ಸುಮಾರು ಇಪ್ಪತ್ತು ವರ್ಷ ಪ್ರಾಯವಿತ್ತು. ಹಝ್ರತ್ ಮುಆಝ್ ಬಿನ್ ಜಬಲ್(ರ)ರಿಗೆ ಮಕ್ಕಾದ ಜನರಿಗೆ ಧಾರ್ಮಿಕ ಶಿಕ್ಷಣ ನೀಡುವ ಜವಾಬ್ದಾರಿಯನ್ನು ವಹಿಸಲಾಗಿತ್ತು. ಹಝ್ರತ್ ಅತಾಬ್(ರ) ಮತ್ತು ಅವರ ತಂದೆ ಖುರೈಶ್ ಕುಟುಂಬದ ಪ್ರಮುಖ ಸದಸ್ಯರಾಗಿದ್ದರು ಮತ್ತು ಇಸ್ಲಾಮಿನ ತೀವ್ರ ವಿರೋಧಿಗಳಾಗಿದ್ದರು. ಅವರ ಇಸ್ಲಾಮ್ ವಿರೋಧವು ಹೇಗಿತ್ತೆಂದರೆ, ಮಕ್ಕಾ ವಿಜಯದ ದಿನ ಹಝ್ರತ್ ಬಿಲಾಲ್(ರ) ಅಧಾನ್ ನೀಡಿದಾಗ, ಅವರು ತಮ್ಮ ಸಹಚರರೊಡನೆ ಹೀಗೆ ಹೇಳಿದರು: 'ನನ್ನ ತಂದೆ ಈ ಅಧಾನ್ ಕೇಳುವ ಮೊದಲೇ ಇಹಲೋಕವನ್ನು ಬಿಟ್ಟುಹೋದದ್ದು ಒಳ್ಳೆಯದಾಯಿತು.' ಹಝ್ರತ್ ಅತಾಬ್(ರ) ಮಕ್ಕಾ ವಿಜಯದ ನಂತರ ಇಸ್ಲಾಮ್ ಸ್ವೀಕರಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅತಾಬ್(ರ)ರನ್ನು ಮಕ್ಕಾದ ಅಧಿಕಾರಿಯಾಗಿ ನೇಮಿಸಿದ ನಂತರ ಹೀಗೆ ಹೇಳಿದರು: 'ಹೇ ಅತಾಬ್, ನಾನು ನಿನ್ನನ್ನು ಅಲ್ಲಾಹನ ಮನೆಯ ಜನರ ಮೇಲೆ (ಮಕ್ಕಾದ ಮುಸ್ಲಿಮರ ಮೇಲೆ) ಅಧಿಕಾರಿಯಾಗಿ ನೇಮಿಸಿದ್ದೇನೆ, ಅವರೊಂದಿಗೆ ಸೌಮ್ಯವಾಗಿ ನಡೆದುಕೊಳ್ಳು.' ಹಝ್ರತ್ ಅತಾಬ್(ರ) ಹಝ್ರತ್ ಪೈಗಂಬರ್(ಸ)ರ ನಿಧನದವರೆಗೂ ಮಕ್ಕಾದ ಅಧಿಕಾರಿಯಾಗಿದ್ದರು. ಒಂದು ವರದಿಯ ಪ್ರಕಾರ ಹಝ್ರತ್ ಅಬೂಬಕರ್ ಸಿದ್ದೀಕ್(ರ)ರ ಖಿಲಾಫತ್ ಕಾಲದಲ್ಲೂ ಅವರು ಮಕ್ಕಾದ ಅಧಿಕಾರಿ ಆಗಿದ್ದರು.

ಹಝ್ರತ್ ಪೈಗಂಬರ್(ಸ) ಹುನೈನ್ ಯುದ್ಧಕ್ಕಾಗಿ ಶವ್ವಾಲ್ 6ರ ಶನಿವಾರದಂದು ಹೊರಟರು ಮತ್ತು ಶವ್ವಾಲ್ 10ರಂದು ಹುನೈನ್ ತಲುಪಿದರು. ಈ ಪ್ರಯಾಣದಲ್ಲಿ ಅವರ ಧರ್ಮಪತ್ನಿಯರಾದ ಹಝ್ರತ್ ಉಮ್ಮು ಸಲ್ಮಾ(ರ) ಮತ್ತು ಹಝ್ರತ್ ಝೈನಬ್(ರ) ಅವರ ಜೊತೆಗೆ ಇದ್ದರು. ಹುನೈನ್ ಯುದ್ಧದಲ್ಲಿ ಶತ್ರು ಸೈನ್ಯಕ್ಕೆ ಹೋಲಿಸಿದರೆ ಮುಸ್ಲಿಮರ ಸಂಖ್ಯೆ ಮತ್ತು ಆಯುಧಗಳು ಕಡಿಮೆ ಆಗಿತ್ತಾದರೂ ಹಿಂದಿನ ಎಲ್ಲ ಯುದ್ಧಗಳಿಗೆ ಹೋಲಿಸಿದರೆ ಈ ಬಾರಿ ಮುಸ್ಲಿಮರ ಸಂಖ್ಯೆ ಹೆಚ್ಚಾಗಿತ್ತು. ಚರಿತ್ರೆಗಾರರ ಪ್ರಕಾರ, ಹಝ್ರತ್ ಪೈಗಂಬರ್(ಸ) ಹನ್ನೆರಡು ಸಾವಿರ ಸೈನಿಕರೊಂದಿಗೆ ಹೊರಟಿದ್ದರು; ಹತ್ತು ಸಾವಿರ ಜನರು ಮಕ್ಕಾ ವಿಜಯಕ್ಕಾಗಿ ಮದೀನಾದಿಂದ ಬಂದಿದ್ದರು ಮತ್ತು ಮಕ್ಕಾದಿಂದ ಎರಡು ಸಾವಿರ ಜನರು ಈ ಯುದ್ಧದಲ್ಲಿ ಭಾಗವಹಿಸಲು ಹಝ್ರತ್ ಪೈಗಂಬರ್(ಸ)ರೊಂದಿಗೆ ಹೊರಟಿದ್ದರು.

ಹಝ್ರತ್ ಸಹಲ್(ರ) ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರೊಂದಿಗೆ ಹುನೈನ್ ಕಡೆಗೆ ಪ್ರಯಾಣ ಮಾಡುತ್ತಿದ್ದೆವು. ಬಹಳ ದೂರ ಪ್ರಯಾಣಿಸಿದ ನಂತರ ಸಂಜೆಯಾದಾಗ ನಾನು ಹಝ್ರತ್ ಪೈಗಂಬರ್(ಸ)ರೊಂದಿಗೆ ನಮಾಝಿನಲ್ಲಿ ಭಾಗವಹಿಸಿದೆ. ಅಷ್ಟರಲ್ಲಿ ಒಬ್ಬ ಸವಾರ ಬಂದು ಹೀಗೆ ಹೇಳಿದನು: 'ಅಲ್ಲಾಹನ ರಸೂಲರೇ, ನಾನು ನಿಮಗಿಂತ ಮುಂದಕ್ಕೆ ಸಾಗಿ ನೋಡಿದೆ, ಹವಾಝಿನ್ ಗೋತ್ರದ ಜನರು ತಮ್ಮ ಮಹಿಳೆಯರು ಮತ್ತು ಜಾನುವಾರುಗಳೊಂದಿಗೆ ಒಟ್ಟುಸೇರಿದ್ದಾರೆ.' ಇದನ್ನು ಕೇಳಿ ಹಝ್ರತ್ ಪೈಗಂಬರ್(ಸ) ಮುಗುಳ್ನಗೆ ಬೀರಿ ಹೀಗೆ ಹೇಳಿದರು: 'ನಾಳೆ ಅದು ಮುಸ್ಲಿಮರಿಗೆ ಯುದ್ಧ ಸಂಪತ್ತಾಗುವುದು, ಇನ್‌ಶಾ ಅಲ್ಲಾಹ್.' ಅನಂತರ ಹೀಗೆ ಕೇಳಿದರು: 'ಇಂದು ರಾತ್ರಿ ನಮಗಾಗಿ ಯಾರು ಕಾವಲು ಕಾಯುತ್ತಾರೆ?'. ಹಝ್ರತ್ ಅನಸ್ ಬಿನ್ ಅಬೀ ಮರ್‌ಸಲ್(ರ) ಹೇಳಿದರು: 'ನಾನು ಕಾವಲು ಕಾಯುತ್ತೇನೆ'. ಹಝ್ರತ್ ಪೈಗಂಬರ್(ಸ) ಅವರೊಡನೆ ಹೀಗೆ ಹೇಳಿದರು: 'ಆ ಘಟ್ಟದ ಕಡೆಗೆ ಹೋಗಿ, ನಿನ್ನಿಂದ ನಮಗೆ ಮೋಸವಾಗದಿರಲಿ' ಅಂದರೆ, ಎಚ್ಚರಿಕೆಯಿಂದ ಕಾವಲು ಕಾಯಬೇಕು ಎಂದು ಹೇಳಿದರು. ಬೆಳಿಗ್ಗೆ ಹಝ್ರತ್ ಪೈಗಂಬರ್(ಸ) ನಮಾಝಿಗಾಗಿ ಹೊರಬಂದರು. ನಮಾಝ್ ನಂತರ ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು: 'ನಿಮ್ಮ ಸವಾರ ಮರಳಿ ಬಂದಿದ್ದಾನೆ, ನಿಮಗೆ ಶುಭವಾಗಲಿ' (ಎಂದರೆ, ಹಝ್ರತ್ ಅನಸ್ ಬಿನ್ ಮರ್ಸಲ್ ಮರಳಿ ಬಂದಿರುವರು). ಅನಂತರ ಹಝ್ರತ್ ಅನಸ್ ಬಿನ್ ಅಬೀ ಮರ್‌ಸಲ್‌ರೊಡನೆ ಹೀಗೆ ಹೇಳಿದರು: 'ನಿಮಗೆ ಸ್ವರ್ಗ ಖಚಿತವಾಗಿದೆ'.

ಮಾಲಿಕ್ ಬಿನ್ ಔಫ್ ಮೂವರು ಗೂಢಚಾರರನ್ನು ಮುಸ್ಲಿಮರ ಸೈನ್ಯಕ್ಕೆ ಕಳುಹಿಸಿದ್ದನು, ಆದರೆ ಅವರು ಮೂವರೂ ಹಿಂದಿರುಗಿದಾಗ ಹೆದರಿಕೆಯಿಂದ ಗೊಂದಲದಲ್ಲಿದ್ದರು. ಅವರು ಹೀಗೆ ಹೇಳುತ್ತಿದ್ದರು: 'ನಾವು ಕುದುರೆಗಳ ಮೇಲಿದ್ದ ಬಿಳಿ ಬಣ್ಣದ ಜನರನ್ನು ನೋಡಿದ್ದೇವೆ. ಯುದ್ಧ ನಡೆದರೆ ನಮಗೆ ಅವರನ್ನು ಜಯಿಸಲು ಸಾಧ್ಯವಿಲ್ಲ. ನಾವು ಭೂಮಿಯ ಜನರ ಮೇಲೆ ನಿಯಂತ್ರಣ

ಸಾಧಿಸಲು ಸಾಧ್ಯವಾಗದಿದ್ದರೆ, ನಾವು ಆಕಾಶದ ಜನರೊಂದಿಗೆ ಹೇಗೆ ಯುದ್ಧ ಮಾಡಲು ಸಾಧ್ಯ? ನೀವು ನಮ್ಮ ಮಾತು ಕೇಳಿ ಹಿಂದಿರುಗಿ ಹೋಗುವುದೇ ಉತ್ತಮ.' ಮಾಲಿಕ್ ಬಿನ್ ಔಫ್ ಆ ಮೂವರನ್ನೂ ಬೈದು ಒಬ್ಬ ಧೈರ್ಯಶಾಲಿ ವ್ಯಕ್ತಿಯನ್ನು ಕಳುಹಿಸಿದನು. ಅವನು ಕೂಡ ಭಯಗೊಂಡು ಬೇಗನೆ ಮರಳಿದನು. ನಾವು ಹಿಂದಿರುಗುವುದೇ ಲೇಸು ಎಂದು ಅವನು ಕೂಡ ಹೇಳಿದನು. ಆದರೆ ಮಾಲಿಕ್ ಬಿನ್ ಔಫ್ ಆ ಮಾತಿಗೆ ಕಿವಿಗೊಡಲಿಲ್ಲ.

ಹಝ್ರತ್ ಸಲ್ಮಾ ಬಿನ್ ಅಕೂ(ರ) ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರೊಂದಿಗೆ ಹವಾಝಿನ್ ಮೇಲೆ ದಾಳಿ ಮಾಡಲು ಹೋಗುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು ಕುಳಿತು ಜನರೊಂದಿಗೆ ಮಾತನಾಡಲು ಪ್ರಾರಂಭಿಸಿದನು, ಅನಂತರ ಅವನು ವೇಗವಾಗಿ ಒಂಟೆಯ ಮೇಲೆ ಏರಿ ಓಡಿಹೋದನು. ಅವನನ್ನು ನೋಡಿ ಹಝ್ರತ್ ಪೈಗಂಬರ್(ಸ) ಹೇಳಿದರು: 'ಇವನು ಒಬ್ಬ ಗೂಢಚಾರ, ಇವನನ್ನು ಹಿಡಿದು ಕೊಲ್ಲಿರಿ'. ಹಾಗೆ ಅವನನ್ನು ಹಿಡಿದು ಕೊಲ್ಲಲಾಯಿತು.

ಹುನೈನ್ ಕಣಿವೆಯು ಅನೇಕ ಬೆಟ್ಟಗಳನ್ನು ಹೊಂದಿದೆ. ಆದ್ದರಿಂದ, ಮಾಲಿಕ್ ಬಿನ್ ಔಫ್ ತನ್ನ ಸೈನಿಕರನ್ನು ಘಟ್ಟಗಳಲ್ಲಿ ಅಡಗಿಸಿಕೊಂಡು ಅನಿರೀಕ್ಷಿತವಾಗಿ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರ ಮೇಲೆ ದಾಳಿ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದನು. ವಿರೋಧಿ ಸೈನ್ಯದ ರಚನೆ ಹೀಗಿತ್ತು: ಎಲ್ಲರಿಗಿಂತ ಮುಂದೆ ಕುದುರೆ ಸವಾರರು, ಅವರ ಹಿಂದೆ ಪದಾತಿ ದಳ, ಅನಂತರ ಒಂಟೆಗಳ ಮೇಲೆ ಮಹಿಳೆಯರು ಮತ್ತು ಮಕ್ಕಳು, ಅನಂತರ ಜಾನುವಾರುಗಳು ಮತ್ತು ಸಾಧನ ಸಾಮಗ್ರಿಗಳು.

ಹಝ್ರತ್ ಪೈಗಂಬರ್(ಸ) ಬನೂ ಸುಲೈಮ್ ಗೋತ್ರದ ಒಂದು ಸಾವಿರ ಕುದುರೆ ಸವಾರರ ತಂಡವನ್ನು ಸೈನ್ಯದ ಮುಂಚೂಣಿಯಲ್ಲಿ ಇಟ್ಟರು ಮತ್ತು ಅದರ ನಾಯಕತ್ವವನ್ನು ಖಾಲಿದ್ ಬಿನ್ ವಲೀದ್(ರ)ರಿಗೆ ವಹಿಸಿದರು. ಹಝ್ರತ್ ಪೈಗಂಬರ್(ಸ) ಸೈನ್ಯದ ಮಧ್ಯದಲ್ಲಿದ್ದರು. ಅವರು ಅನ್ಸಾರ್ ಮತ್ತು ಮುಹಾಜಿರರಲ್ಲಿ ದೊಡ್ಡ ಧ್ವಜಗಳನ್ನು ಹಂಚಿದರು. ಮುಹಾಜಿರರ ಒಂದು ಧ್ವಜವನ್ನು ಹಝ್ರತ್ ಅಲಿ(ರ)ರಿಗೆ, ಇನ್ನೊಂದು ಧ್ವಜವನ್ನು ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ)ರಿಗೆ, ಮತ್ತೊಂದು ಧ್ವಜವನ್ನು ಹಝ್ರತ್ ಉಮರ್(ರ)ರಿಗೆ ನೀಡಲಾಗಿತ್ತು. ಬನೂ ಖಝ್ರಜಿನ ಧ್ವಜವನ್ನು ಹಝ್ರತ್ ಹಬಾಬ್ ಬಿನ್ ಮುನ್‌ಝಿರ್(ರ)ರಿಗೆ ಮತ್ತು ಔಸ್‌ನ ಧ್ವಜವನ್ನು ಅಸೀದ್ ಬಿನ್ ಹುಝೈರ್(ರ)ರಿಗೆ ವಹಿಸಲಾಗಿತ್ತು. ಹುನೈನ್ ಯುದ್ಧದ ಆರಂಭಿಕ ಹಂತದಲ್ಲಿ ಮುಸ್ಲಿಮರಿಗೆ ಗೆಲುವು ಸಿಕ್ಕಿತು, ಆದರೆ ನಂತರ ಸತ್ಯನಿಷೇಧಿಗಳ ಹಠಾತ್ ದಾಳಿಯಿಂದ ಮುಸ್ಲಿಮರಲ್ಲಿ ನೂಕುನುಗ್ಗಲು ಉಂಟಾಯಿತು ಮತ್ತು ಮುಸ್ಲಿಮರು ತಾತ್ಕಾಲಿಕವಾಗಿ ಸೋಲನ್ನು ಅನುಭವಿಸಿದರು. ಆದರೆ, ಅದರ ನಂತರ ಮುಸ್ಲಿಮರು ಭಾರಿ ಗೆಲುವನ್ನು ಸಾಧಿಸಿದರು. ಸಹೀಹ್ ಬುಖಾರಿಯ ವರದಿಯ ಪ್ರಕಾರ, ಹಝ್ರತ್ ಬರಾಅ್ ಬಿನ್ ಆಝಿಬ್ ಹೇಳುತ್ತಾರೆ: ನಾವು ಬನೂ ಹವಾಝಿನ್ ಮೇಲೆ ದಾಳಿ ಮಾಡಿದಾಗ, ಅವರು ಸೋತು ಹಿಂದಕ್ಕೆ ಸರಿದರು ಮತ್ತು ನಾವು ಯುದ್ಧಸಂಪತ್ತನ್ನು ಸಂಗ್ರಹಿಸಲು ತೊಡಗಿದೆವು. ಇದನ್ನು ನೋಡಿ ಅವರು ನಮ್ಮ ಮೇಲೆ ಬಾಣಗಳ ಸುರಿಮಳೆ ಮಾಡಿದರು. ಇದರಿಂದ ರಕ್ಷಣಾ ಸಾಧನಗಳಿಲ್ಲದ ಯುವಕರು ಬೆನ್ನು ತೋರಿಸಿ ಓಡಿದರು, ಆದರೆ ಹಝ್ರತ್ ಪೈಗಂಬರ್(ಸ) ಆಗಲೂ ಯುದ್ಧರಂಗದಲ್ಲಿ ದೃಢವಾಗಿ ನಿಂತಿದ್ದರು. ಅವರು ಬಿಳಿ ಹೇಸರಗತ್ತೆಯ ಮೇಲೆ ಸವಾರಿ ಮಾಡುತ್ತಿದ್ದರು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ) ಭಾಗವಹಿಸಿದ ಎಲ್ಲ ಯುದ್ಧಗಳಲ್ಲಿ ಅತ್ಯಂತ ಗಮನಾರ್ಹವಾದ ಅಂಶವೆಂದರೆ, ಪರಿಸ್ಥಿತಿ ಏನೇ ಇರಲಿ, ಅವರಂತಹ ಧೈರ್ಯ ಮತ್ತು ಶೌರ್ಯದ ಉದಾಹರಣೆ ಎಲ್ಲೂ ಸಿಗುವುದಿಲ್ಲ. ದೊಡ್ಡ ದೊಡ್ಡ ವೀರರ ಕಾಲುಗಳು ನಡುಗಿದ ಸಂದರ್ಭಗಳಲ್ಲೂ ಹಝ್ರತ್ ಪೈಗಂಬರ್(ಸ) ಬಂಡೆಯಂತೆ ದೃಢವಾಗಿ ನಿಂತಿದ್ದರು.

ಹುನೈನ್ ಯುದ್ಧದ ದಿನ ಬಾಣಗಳಿಂದ ಗಾಯಗೊಂಡು ಹಿಂದೆಸರಿದ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹುನೈನ್ ಯುದ್ಧದಲ್ಲಿ ಶತ್ರುಗಳ ಬಾಣಗಳ ದಾಳಿ ತೀವ್ರವಾದ ಕಾರಣದಿಂದ ಮುಸ್ಲಿಮರ ಸೈನ್ಯವು ಹಿಂದೆಸರಿದಾಗ ಹಝ್ರತ್ ಪೈಗಂಬರ್(ಸ) ಕೆಲವು ಸಹಾಬಿಯರನ್ನು ಮಾತ್ರ ಜೊತೆಯಲ್ಲಿ ಕರೆದುಕೊಂಡು ಶತ್ರುಗಳ ಕಡೆಗೆ ಧಾವಿಸಿದರು. ಶತ್ರುಗಳ ದಾಳಿ ತೀವ್ರವಾಗಿರುವುದನ್ನು ನೋಡಿ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರನ್ನು ತಡೆಯಲು ಬಯಸಿದರು ಮತ್ತು ಮುಂದೆ ಬಂದು ಅವರ ಕುದುರೆಯ ಕಡಿವಾಣವನ್ನು ಹಿಡಿದರು. ಆದರೆ ಹಝ್ರತ್ ಪೈಗಂಬರ್(ಸ) ಹೇಳಿದರು: 'ನನ್ನ ಕುದುರೆಯ ಕಡಿವಾಣವನ್ನು ಬಿಟ್ಟುಬಿಡು'. ಅನಂತರ ಅವರು ಹೀಗೆ ಪದ್ಯವನ್ನು ಹೇಳುತ್ತಾ ಮುಂದೆ ಸಾಗಿದರು: **ಅನನ್ನಬಿಯು ಲಾ ಕಧಿಬ್, ಅನ ಇಬ್ನು ಅಬ್ದಿಲ್ ಮುತ್ತಲಿಬ್**. ಅಂದರೆ, 'ನಾನು ಅಲ್ಲಾಹನ ಪ್ರವಾದಿಯಾಗಿರುವೆನು ಮತ್ತು ನಾನು ಸುಳ್ಳುಗಾರನಲ್ಲ ಹಾಗು ನಾನು ಅಬ್ದುಲ್ ಮುತ್ತಲಿಬ್‌ನ ಪುತ್ರನಾಗಿದ್ದೇನೆ.' ಹಝ್ರತ್ ಪೈಗಂಬರ್(ಸ) 'ನಾನು ಅಬ್ದುಲ್ ಮುತ್ತಲಿಬ್‌ನ ಪುತ್ರ' ಎಂದು ಹೇಳಿದ್ದರ ಅರ್ಥವೇನೆಂದರೆ, ಆ ಸಮಯದಲ್ಲಿ ಶತ್ರುಗಳ ದಾಳಿ ಎಷ್ಟೊಂದು ತೀವ್ರವಾಗಿತ್ತು ಎಂದರೆ ನಾಲ್ಕು ಸಾವಿರ ಬಾಣ ಎಸೆಯುವವರು ಬಾಣಗಳ ಮಳೆ ಸುರಿಸುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ಅವರು ಮುಂದೆ ಸಾಗಿದ್ದು ಮಾನವನ ಶಕ್ತಿಗೆ ಮೀರಿದ ಸಂಗತಿಯಾಗಿ ತೋರುತ್ತದೆ. ಇದರಿಂದ ಯಾರೂ ಮೋಸ ಹೋಗಬಾರದು ಮತ್ತು ಅವರಲ್ಲಿ ಯಾವುದೇ ದೈವಿಕ ಶಕ್ತಿ ಇದೆ ಎಂದು ಭಾವಿಸಬಾರದು ಎಂಬ ಚಿಂತೆಯಿಂದ 'ನಾನು ಕೇವಲ ಅಬ್ದುಲ್ ಮುತ್ತಲಿಬ್‌ರ ಪುತ್ರ ಮತ್ತು ಒಬ್ಬ ಮನುಷ್ಯ ಮಾತ್ರವಾಗಿದ್ದೇನೆ' ಎಂದೂ 'ನಾನು ಪ್ರವಾದಿಯಾಗಿರುವ ಕಾರಣದಿಂದ ಅಲ್ಲಾಹನ ಸಹಾಯ ನನ್ನೊಂದಿಗಿದೆ' ಎಂದೂ ಅವರು ಸ್ಪಷ್ಟಪಡಿಸಿದರು.

ಮುಸ್ಲಿಮರ ಸೈನ್ಯದಲ್ಲಿ ಗೊಂದಲ ಉಂಟಾದಾಗ, ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹೆಚ್ಚು ಕಮ್ಮಿ ಮುನ್ನೂರು ಜನರು ಉಳಿದಿದ್ದರು ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಹುನೈನ್ ಯುದ್ಧದ ಸಮಯದಲ್ಲಿ ಎಲ್ಲರೂ ಓಡಿಹೋಗಿರಲಿಲ್ಲ, ಮಕ್ಕಾದಲ್ಲಿನ ನವ ಮುಸ್ಲಿಮರ ಪೈಕಿ ಇದ್ದ ಕಪಟವಿಶ್ವಾಸಿಗಳು ಹಾಗೂ ಇನ್ನೂ ಮುಸ್ಲಿಮರಾಗದೇ ಇದ್ದೂ ಆ ಯುದ್ಧದಲ್ಲಿ ಭಾಗವಹಿಸಿದ್ದ ಮಕ್ಕಾದ ಇತರ ಜನರು

ಓಡಲು ಪ್ರಾರಂಭಿಸಿದರು. ಶತ್ರುಗಳು ಒಂದೇ ಸವನೇ ಬಾಣಗಳ ಸುರಿಮಳೆ ಪ್ರಾರಂಭಿಸಿದ ಕಾರಣದಿಂದ ಈ ಅನಿರೀಕ್ಷಿತ ಸೋಲು ಸಂಭವಿಸಿತ್ತು. ಇದರ ಹೆಚ್ಚಿನ ವಿವರಗಳನ್ನು ಇನ್‌ಶಾ ಅಲ್ಲಾಹ್ ಮುಂದಿನ ಬಾರಿ ವಿವರಿಸಲಾಗುವುದು.

ಖುತ್ಬದ ಕೊನೆಯಲ್ಲಿ ಜರ್ಮನಿಯಲ್ಲಿ ನಡೆಯಲಿರುವ ಜಲ್ಸ ಸಾಲಾನ ಕುರಿತು ಉಪದೇಶ ನೀಡುತ್ತಾ ಹುಝೂರ್ ಹೇಳಿದರು: ಅಲ್ಲಾಹನು ಅವರಿಗೆ ಜಲ್ಸದ ಉದ್ದೇಶಗಳನ್ನು ಪೂರೈಸುವ ತೌಫೀಕ್ ನೀಡಲಿ. ತಮ್ಮ ಅರಿವು, ಸತ್ಕರ್ಮ ಮತ್ತು ಆಧ್ಯಾತ್ಮಿಕ ಪ್ರಗತಿಯಲ್ಲಿ ಸತತವಾಗಿ ಮುಂದುವರೆಯುವುದಾಗಿ ಪ್ರತಿಜ್ಞೆ ಮಾಡಿರಿ ಮತ್ತು ಅದಕ್ಕಾಗಿ ಪ್ರಯತ್ನಿಸಿರಿ. ವಿಶೇಷವಾಗಿ ಅಲ್ಲಾಹನ ಸ್ಮರಣೆ ಮತ್ತು ದುಆಗಳಲ್ಲಿ ನಿರತರಾಗಿರಿ. ತಮ್ಮ ಮತ್ತು ತಮ್ಮ ಮುಂದಿನ ಪೀಳಿಗೆಗಳಿಗಾಗಿ ದುಆ ಮಾಡುವುದರ ಜೊತೆಗೆ ಜಮಾಅತಿನ ಪ್ರಗತಿಗಾಗಿ ಮತ್ತು ಎಲ್ಲ ವಿರೋಧಿಗಳ ಉಪದ್ರವಗಳಿಂದ ಅಲ್ಲಾಹನ ಅಭಯ ಲಭಿಸಲು ಹಾಗೂ ಅವರ ದುಷ್ಪತನ ಕೊನೆಗೊಳ್ಳಲು ಕೂಡ ದುಆ ಮಾಡಿರಿ. ಅಲ್ಲಾಹನು ಅವರ ಕೆಡುಕಿನಿಂದ ರಕ್ಷಿಸಲಿ.

(ಅನಂತರ ದುಆ ಮಾಡಲು ಮನವಿ ಮಾಡುತ್ತಾ ಹುಝೂರ್ ಹೇಳಿದರು:) ಪಾಕಿಸ್ತಾನದಲ್ಲಿ ಪ್ರತಿದಿನವೂ ಕೆಲವು ದುಃಖಕರ ಘಟನೆಗಳು ನಡೆಯುತ್ತವೆ. ಅಲ್ಲಾಹನು ಆ ವಿರೋಧಿಗಳನ್ನು ಶೀಘ್ರವಾಗಿ ಹಿಡಿಗೂಡಲಿ. ಜಾಗತಿಕ ಶಾಂತಿಗಾಗಿಯೂ ದುಆ ಮಾಡಿರಿ. ಈ ಲೌಕಿಕ ಜನರು ತಮ್ಮ ಕೆಟ್ಟ ಕೃತ್ಯಗಳ ಕಾರಣದಿಂದ ತಮ್ಮ ವಿನಾಶಕ್ಕೆ ಹತ್ತಿರವಾಗುತ್ತಿದ್ದಾರೆ. ಅಲ್ಲಾಹನು ನಮ್ಮನ್ನು ಈ ಭಯಾನಕ ವಿನಾಶದಿಂದ ರಕ್ಷಿಸಲಿ. ಮಧ್ಯಪ್ರಾಚ್ಯದ ದೇಶಕ್ಕಾಗಿಯೂ ದುಆ ಮಾಡಿರಿ. ಕ್ರೂರತೆ ಮತ್ತು ಬರ್ಬರತೆಯಲ್ಲಿ ಝಿಯೋನಿ ಸರ್ಕಾರ ಎಲ್ಲೆ ಮೀರಿದೆ. ಅವರನ್ನು ಭೂಮಿಯಿಂದಲೇ ಅಳಿಸಿಹಾಕಲು ಬಯಸುತ್ತಾರೆ ಎಂದು ತೋರುತ್ತದೆ. ನಿರಪರಾಧಿ ಮಕ್ಕಳು, ಮಹಿಳೆಯರು, ವೃದ್ಧರು, ರೋಗಿಗಳು ಮತ್ತು ಅಮಾಯಕರ ಮೇಲೆ ದೌರ್ಜನ್ಯದ ಎಲ್ಲೆ ಮೀರಿದೆ. ಎಲ್ಲ ಕಡೆ ಸಾಮೂಹಿಕ ಹತ್ಯೆ ನಡೆಯುತ್ತಿದೆ. ಇದು ತಪ್ಪು, ಇದನ್ನು ನಿಲ್ಲಿಸಿ ಎಂದು ಈಗ ಕೆಲವು ರಾಜಕಾರಣಿಗಳು ಮತ್ತು ಸರ್ಕಾರಗಳು ಕೂಡ ಧ್ವನಿ ಎತ್ತುತ್ತಿದ್ದಾರೆ. ಆದರೆ, ಈಗಲೂ ಆ ನಿರಂಕುಶ ಸರ್ಕಾರವು ಅವರ ಮಾತನ್ನು ಕೇಳಲು ಸಿದ್ಧವಿಲ್ಲ. ಸಂಪತ್ತು ಮತ್ತು ಶಕ್ತಿಯ ನಶೆ ಅಮೆರಿಕಾ ಮತ್ತು ಅದರ ಮಿತ್ರಪಕ್ಷಗಳನ್ನು ಅಹಂಕಾರ ಮತ್ತು ದಬ್ಬಾಳಿಕೆಯಲ್ಲಿ ಎಲ್ಲೆ ಮೀರುವಂತೆ ಮಾಡಿದೆ. ಮುಸ್ಲಿಂ ಸರ್ಕಾರಗಳು ಕೂಡ ಏನೂ ಮಾಡುತ್ತಿಲ್ಲ, ಏನೂ ಮಾಡಲು ಸಾಧ್ಯವಾಗದಿದ್ದರೆ, ಅಲ್ಲಾಹನೇ ಅವರಿಗೆ ಸಹಾಯ ಮಾಡಲು ಮುಂದೆ ಬರಲಿಕ್ಕಾಗಿ ಕನಿಷ್ಠಪಕ್ಷ ತಮ್ಮ ಪರಿಸ್ಥಿತಿಗಳನ್ನು ಬದಲಾಯಿಸಿಕೊಂಡು ಅಲ್ಲಾಹನ ಮುಂದೆ ಬಾಗಬೇಕು. ಅವರಿಗೆ ಈ ಬುದ್ಧಿಯಾದರೂ ಉಂಟಾಗುವುದಾದರೆ ಎಷ್ಟು ಚೆನ್ನ! ಇದಲ್ಲದೇ ಮುಸ್ಲಿಮರು ಮುಸ್ಲಿಮರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ. ಅಲ್ಲಾಹನು ಅವರನ್ನು ಈ ಕ್ರೂರತೆಯಿಂದ ಕೂಡ ತಡೆಯಲಿ.

ಇಂದು ಈ ಎಲ್ಲ ದೌರ್ಜನ್ಯಗಳ ವಿರುದ್ಧ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಧ್ವನಿ ಎತ್ತುವುದು ಮತ್ತು ವಿಶೇಷವಾಗಿ ನೋವಿನಿಂದ ದುಆ ಮಾಡುವುದು ಅಹ್ಮದಿಯರಾದ ನಮ್ಮ ಕರ್ತವ್ಯವಾಗಿದೆ. ಅಲ್ಲಾಹನು ಇದರ ತೌಫೀಕ್ ನೀಡಲಿ.

————————————*****————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

At, ***'Masjid Mubarak',*** *Islamabad, Tilford,* U.K. On 29-08-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon